ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಇ-ಆಡಳಿತ-ವಾ.ಕ್ರಿ.ಯೋ./2013-14. ದಿನಾಂಕ:10-02-2014

ಜ್ಞಾಪನ

ವಿಷಯ: 2013-14ನೇ ಸಾಲಿಗೆ ಶಿಕ್ಷಣವಾಹಿನಿ ತಂತ್ರಾಂಶವನ್ನು ಉಪಯೋಗಿಸಲು ತರಬೇತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಸಿಬ್ಬಂದಿಗಳು/ ಅಧಿಕಾರಿಗಳಿಗೆ ನೀಡಲು ರಾಜ್ಯದ ಪ್ರತಿ ಡಯಟ್‌ನಿಂದ 02 ಮಾಸ್ಟರ್ ತರಬೇತಿದಾರರಿಗೆ ತರಬೇತಿ ನೀಡುವ ಬಗ್ಗೆ

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ ಇಡಿ 63 ಯೋಯಕ 2013 ದಿನಾಂಕ: 12-08-2013

2013-14ನೇ ಸಾಲಿನ ಇ-ಆಡಳಿತ ಘಟಕದ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾದಂತೆ, ತರಬೇತಿ ಕಾರ್ಯಕ್ರಮವನ್ನು ನಿಗಧಿತ ಅವಧಿಯಲ್ಲಿ ಇ-ಆಡಳಿತ ಘಟಕದ ವತಿಯಿಂದ ಪೂರ್ಣಗೊಳಿಸಲು ಸೂಚಿಸಿದೆ.

ಶಿಕ್ಷಣವಾಹಿನಿ ತಂತ್ರಾಂಶವನ್ನು ಉಪಯೋಗಿಸಲುತರಬೇತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಸಿಬ್ಬಂದಿಗಳು/ ಅಧಿಕಾರಿಗಳಿಗೆ ನೀಡಲು ರಾಜ್ಯದ ಪ್ರತಿ ಡಯಟ್‌ನಿಂದ 02 ಹಿರಿಯ ಉಪನ್ಯಾಸಕರು/ಉಪನ್ಯಾಸಕರಿಗೆ ಮಾಸ್ಟರ್ ತರಬೇತಿದಾರರಿಗೆ ತರಬೇತಿ ನೀಡಲು ಉದ್ದೇಶಿಸಲಾಗಿದೆ. ಈ ರೀತಿ ತರಬೇತಿ ಪಡೆದ ಮಾಸ್ಟರ್ ತರಬೇತಿದಾರರು ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಲ್ಲಿನ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ 02 ದಿನಗಳ ತರಬೇತಿ ಕಾರ್ಯವನ್ನು ನೀಡಬೇಕಾಗಿದೆ. ಆದ್ದರಿಂದ ತಮ್ಮ ಡಯಟ್ ನಿಂದ 02 ಉಪನ್ಯಾಸಕರನ್ನು ಸದರಿ ತರಬೇತಿಗಾಗಿ ನಿಯೋಜಿಸಲು ಈ ಮೂಲಕ ಸೂಚಿಸಿದೆ.

**ಜಿಲ್ಲಾ ಡಯಟ್ ನಿಂದ ಸದರಿ ತರಬೇತಿಗೆ ನಿಯೋಜಿಸುವಾಗ ಈ ಕೆಳಗೆ ನಮೂದಿಸಿದ ಅಂಶಗಳನ್ನು ತಪ್ಪದೇ ಅನುಸರಿಸತಕ್ಕದ್ದು.**

1. ಸದರಿ ತರಬೇತಿಗೆ ಆಯ್ಕೆ ಮಾಡುವಾಗ ಹಿರಿಯ ಉಪನ್ಯಾಸಕರು/ಉಪನ್ಯಾಸಕರನ್ನು ಸೇರಿಸಿ ಇಬ್ಬರನ್ನು ಮಾತ್ರ ತರಬೇತಿಗಾಗಿ ನಿಯೋಜನೆ ಮಾಡತಕ್ಕದ್ದು.
2. ಸದರಿಯವರು ಸ್ವತಂತ್ರವಾಗಿ ಗಣಕಯಂತ್ರದಲ್ಲಿ ಕಾರ್ಯನಿರ್ವಹಣೆ ಮಾಡುವಂತೆ ಇರಬೇಕು.
3. ಡಯಟ್‌ನಲ್ಲಿರುವ ಗಣಕಯಂತ್ರ ತರಬೇತಿ ಕೇಂದ್ರವನ್ನು ಸುಸ್ಥಿತಿಯಲ್ಲಿರಿಸಿ ಕೊಂಡು, ಇಂಟರ್‌ನೆಟ್ ಸೌಲಭ್ಯವು ಸರಿಯಾಗಿ ನಿರ್ವಹಣೆಯಾಗುತ್ತಿರುವ ಬಗ್ಗೆ ಖಾತ್ರಿ ಮಾಡಿಕೊಂಡು ನಂತರ ತರಬೇತಿಯ ವೇಳಾಪಟ್ಟಿಯನ್ನು ತಯಾರಿಸಿ 25 ಮಾರ್ಚ 2014 ರೊಳಗೆ ತರಬೇತಿಯನ್ನು ಪೂರ್ಣಗೊಳಿಸುವುದು.
4. ತರಬೇತಿ ಕಾರ್ಯದಲ್ಲಿ ಯಾವುದೇ ಕಾರಣಕ್ಕೂ ಗಣಕಯಂತ್ರ ಹಾಗೂ ಇಂಟರ್ ನೆಟ್ ಸೌಲಭ್ಯದಲ್ಲಿ ತೊಂದರೆಯಾಗದಂತೆ ನಿಗಾವಹಿಸುವುದು.

**ಇ-ಆಡಳಿತ ಘಟಕದ ವತಿಯಿಂದ ಶಿಕ್ಷಣವಾಹಿನಿ ತಂತ್ರಾಂಶ ತರಬೇತಿಯ ವಿವರ:**

| ತರಬೇತಿ ದಿನಾಂಕ | ತರಬೇತಿ ನೀಡುವ ಸ್ಥಳ | ತರಬೇತಿ ಹಾಜರಾಗಬೇಕಾದವರ ವಿವರ |
|---|---|---|
| 20-02-2014 ಮತ್ತು 21-02-2014 | ಡಯಟ್, ಬೆಂಗಳೂರು ನಗರ ಜಿಲ್ಲೆ, ರಾಜರಾಜೇಶ್ವರಿ ನಗರ ಬೆಂಗಳೂರು | ಬೆಂಗಳೂರು ಹಾಗೂ ಮೈಸೂರು ವಿಭಾಗದ ಎಲ್ಲಾ ಡಯಟ್‌ನಿಂದ ನಿಯೋಜನೆಯಾದ ಹಿರಿಯ ಉಪನ್ಯಾಸಕರು/ಉಪನ್ಯಾಸಕರುಗಳು |
| 24-02-2014 ಮತ್ತು 25-02-2014 | ಡಯಟ್, ಬೆಂಗಳೂರು ನಗರ ಜಿಲ್ಲೆ, ರಾಜರಾಜೇಶ್ವರಿ ನಗರ ಬೆಂಗಳೂರು | ಗುಲ್ಬರ್ಗಾ ಹಾಗೂ ದಾರವಾಡ ವಿಭಾಗದ ಡಯಟ್‌ನಿಂದ ನಿಯೋಜನೆಯಾದ ಹಿರಿಯ ಉಪನ್ಯಾಸಕರು/ಉಪನ್ಯಾಸಕರುಗಳು |

ಸದರಿ ತರಬೇತಿಗಾಗಿ ನಿಯೋಜಿತ ಹಿರಿಯ ಉಪನ್ಯಾಸಕರು/ಉಪನ್ಯಾಸಕರುಗಳ ಪ್ರಯಾಣ ಭತ್ಯೆ ಹಾಗೂ ಇನ್ನಿತರ ಭತ್ಯೆಗಳನ್ನು ನಿಯಮಾನುಸಾರ ಆಯಾ ಕಛೇರಿಯ ವತಿಯಿಂದ ಭರಿಸತಕ್ಕದ್ದು.

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಪ್ರತಿಯನ್ನು

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು ಇವರಿಗೆ ಮಾಹಿತಿಗಾಗಿ
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಹಾಗೂ ಗುಲ್ಬರ್ಗಾ ಆಯುಕ್ತಾಲಯ ಇವರಿಗೆ ಮಾಹಿತಿಗಾಗಿ
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಇವರಿಗೆ ಮಾಹಿತಿಗಾಗಿ
4. ಅಪರ ಆಯುಕ್ತರು(ಆಡಳಿತ) ಆಯುಕ್ತರ ಕಛೇರಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ
5. ಪ್ರಾಂಶುಪಾಲರು, ಡಯಟ್ ಬೆಂಗಳೂರು ನಗರ ಜಿಲ್ಲೆ ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ದಿನಾಂಕಗಳಂದು ಗಣಕಯಂತ್ರ ಕೊಠಡಿಗಳನ್ನು ಸದರಿ ತರಬೇತಿ ಕಾರ್ಯಕ್ಕಾಗಿ ಮೀಸಲಿಡಲು ಹಾಗೂ ತರಬೇತಿ ಸಮಯದಲ್ಲಿ ಇಂಟರ್ ನೆಟ್ ವ್ಯವಸ್ಥೆ ಸರಿಯಾಗಿರುವಂತೆ ನೋಡಿಕೊಳ್ಳತಕ್ಕದ್ದು.
6. ರಾಜ್ಯದ ಎಲ್ಲಾ ಪ್ರಾಂಶುಪಾಲರು, ಡಯಟ್ ಇವರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತಕ್ರಮಕ್ಕಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ